ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-03-1994.

# *ಅತೀತವಾದ, ಪ್ರಿಯವಾದ, ಅದ್ಭುತವಾದ, ಸ್ನೇಹ ಮತ್ತು ಸುಖಭರಿತ ಅವತರಣೆ- ಶಿವ ಜಯಂತಿ.*

(न्यारा-प्यारा, वन्डरफुल, स्नेह और सुखभरा अवतरण - शिव जयन्ती)

**ನಿರಾಕಾರನು, ಸರ್ವಶಕ್ತಿವಂತನೂ ಆದ  ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ವ್ರತ, ಜಾಗರಣೆ ಮತ್ತು ಬಲಿಯ ಯಥಾರ್ಥ ಸ್ವರೂಪದಲ್ಲಿ ಸ್ಥಿತರನ್ನಾಗಿ ಮಾಡುವ ಶಿವ ಭೋಲನಾಥನು ತನ್ನ ಸಾಲಿಗ್ರಾಮ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ತ್ರಿದೇವ ರಚಯಿತನಾದ ತಂದೆಯು, ತನ್ನ ಪೂಜ್ಯ ಸಾಲಿಗ್ರಾಮಗಳಾದ ಮಕ್ಕಳೊಂದಿಗೆ ಮಿಲನಮಾಡಲು ಬಂದಿದ್ದಾರೆ. ಹೇಗೆ ಜ್ಯೋತಿರ್ಬಿಂದು ಸ್ವರೂಪನಾದ ತಂದೆಯ ಪೂಜೆಯಾಗುವುದು ಹಾಗೂ ಸ್ಮೃತಿಚಿಹ್ನೆಯನ್ನೂ ಆಚರಿಸುತ್ತಾರೆಯೋ ಹಾಗೆಯೇ ತಂದೆಯ ಜೊತೆ-ಜೊತೆಗೆ ಸಾಲಿಗ್ರಾಮ ಆತ್ಮರಾದ ತಮಗೂ ಪೂಜೆಯಾಗುವುದು. ಒಬ್ಬ ತಂದೆಯ ಪೂಜೆಯು  ತ್ರಿಮೂರ್ತಿಯದಾಗುತ್ತದೆ. ಮತ್ತು ಮಕ್ಕಳಾದ ನೀವು ಬಹಳಷ್ಟು ಜನ

ಇದ್ದೀರಿ ಇಬ್ಬರದೂ ಪೂಜೆಯಾಗುತ್ತದೆ. ಏಕೆಂದರೆ ತಂದೆಯು ಎಲ್ಲಾ ಮಕ್ಕಳನ್ನೂ ತನ್ನ ಸಮಾನ ಪೂಜ್ಯರನ್ನಾಗಿ ಮಾಡುತ್ತಾರೆ. ಯಾವಾಗಲಾದರೂ ಎಲ್ಲಾದರೂ ಸಾಲಿಗ್ರಾಮಗಳನ್ನು ನೋಡಿದಾಗ ಯಾವ ಅನುಭವವಾಗುವುದು? ನಾವೇ ಆಗಿದ್ದೇವೆ ಎಂದು ಅನುಭವವಾಗುತ್ತದೆಯೇ? ಹಾಗಾದರೆ ತಂದೆಯು ಮಕ್ಕಳನ್ನು ತಮ್ಮ ಸಮಾನವೇನು! ತನಗಿಂತಲೂ ಶ್ರೇಷ್ಠವಾದ ಪೂಜ್ಯರನ್ನಾಗಿ ಮಾಡಿದ್ದಾರೆ. ಮಕ್ಕಳ ಪೂಜೆಯು ಡಬಲ್ ರೂಪದಲ್ಲಾಗುತ್ತದೆ, ತಂದೆಯ ಪೂಜೆಯೇ ಕೇವಲ ಒಂದೇ ಶಿವಲಿಂಗದ ರೂಪದಲ್ಲಾಗುವುದು. ತಾವು ಮಕ್ಕಳದು ಸಾಲಿಗ್ರಾಮ ರೂಪದಲ್ಲಿಯೂ ಹಾಗೂ ದೇವಾತ್ಮರ ರೂಪದಲ್ಲಿಯೂ ಆಗುತ್ತದೆ. ತಂದೆಗಿಂತಲೂ ಹೆಚ್ಚಾಗಿ ಡಬಲ್ ರೂಪದ ಪೂಜೆಗೆ ಅಧಿಕಾರಿ ಆತ್ಮರು ತಾವಾಗಿದ್ದೀರಿ. ಹೇಗೆ ಡಬಲ್ ವಿದೇಶಿಗಳೆಂದು ಕರೆಸಿಕೊಳ್ಳುತ್ತೀರೆಂದರೆ ಡಬಲ್ ಪೂಜ್ಯರೂ ಆಗಿದ್ದೀರಿ. ಡಬಲ್ ಕಿರೀಟಧಾರಿಗಳೂ ತಾವಾಗಿದ್ದೀರಿ. ನಿರಾಕಾರನಾದ ತಂದೆಯು ಆಗುವುದಿಲ್ಲ. ಕೆಲವೊಂದು ಕಡೆಯಲ್ಲಿ ಭಕ್ತಜನರು ಶಿವನ ಪ್ರತಿಮೆಗೆ ಕಿರೀಟವನ್ನು ಇಡುತ್ತಾರೆ ಏಕೆಂದರೆ ಕಿರೀಟಧಾರಿಗಳನ್ನಾಗಿ ಮಾಡಿದ್ದಾರೆ ಆದ್ದರಿಂದ ಕೆಲವೊಂದೆಡೆ ಕಿರೀಟವನ್ನು ತೋರಿಸುತ್ತಾರೆ. ಆದರೆ ತಂದೆಯು ಎಂದಿಗೂ ರತ್ನಗಳಿಂದ ಶೃಂಗರಿಸಿದ ಚಿನ್ನ- ಬೆಳ್ಳಿಯ ಕಿರೀಟಧಾರಿ ಆಗುವುದಿಲ್ಲ. ಏಕೆಂದರೆ ಕಿರೀಟ ಧಾರಣೆಯಾಗುವುದು ಪ್ರತ್ಯಕ್ಷದಲ್ಲಿ ಮಸ್ತಕದಲ್ಲಿ ಅಂದಮೇಲೆ ನಿರಾಕಾರ ತಂದೆಯವರಿಗೆ ಮಸ್ತಕವಿದೆಯೇ? ಶರೀರವೇ ಇಲ್ಲವೆಂದಾಗ ಕಿರೀಟವನ್ನು ಧಾರಣೆ ಮಾಡಿಕೊಳ್ಳುವುದು ಹೇಗೆ! ಆದರೆ ಸ್ನೇಹವಿರುವ ಕಾರಣ ಕಿರೀಟವನ್ನು ತೋರಿಸಿಬಿಡುತ್ತಾರೆ. ತಂದೆಯು ಮಕ್ಕಳನ್ನು ತನಗಿಂತಲೂ ಮುಂದಿಟ್ಟಿದ್ದಾರೆ. ಇಷ್ಟು ಖುಷಿ ಹಾಗೂ ಇಷ್ಟು ಶ್ರೇಷ್ಠ ಸ್ಮೃತಿಯಿರುತ್ತದೆಯೇ? ಬಾಪ್‌ದಾದಾರವರಿಗೆ ತನ್ನ ಜಯಂತಿಯನ್ನಾಚರಿಸುವ ಖುಷಿಯಿಲ್ಲ ಆದರೆ ತಮ್ಮೆಲ್ಲರ ಜಯಂತಿಯೂ ಆಗಿರುವ ಕಾರಣ ಖುಷಿಯಿದೆ. ಏಕೆಂದರೆ ತಂದೆಯೊಬ್ಬರೇ ಏನನ್ನೂ ಮಾಡಲು ಸಾಧ್ಯವಿಲ್ಲ ಹಾಗೂ ತಾವೊಬ್ಬರೇ ಸಹ ಏನನ್ನೂ ಮಾಡಲು ಸಾಧ್ಯವಿಲ್ಲ. ಕೆಲಕೆಲವು ಮಕ್ಕಳಿಗೆ ಕೆಲವೊಮ್ಮೆ ನಾನೇ ಮಾಡುವವನಾಗಿದ್ದೇನೆ ಎನ್ನುವುದು ಬಂದುಬಿಡುತ್ತದೆ ಆದರೆ ತಂದೆಯಿಲ್ಲದೆ ಸಫಲತೆಯು ಸಿಗುವುದಿಲ್ಲ. ಹಾಗಾದರೆ ತಂದೆಯೊಬ್ಬರೇ ಏನನ್ನೂ ಮಾಡಲು ಸಾಧ್ಯವಿಲ್ಲ. ಅದೇರೀತಿ ಕೇವಲ ಮಕ್ಕಳೂ ಸಹ ಏನನ್ನೂ ಮಾಡಲು ಸಾಧ್ಯವಿಲ್ಲ. ತಂದೆಯೇನಾದರೂ ಮಕ್ಕಳೊಂದಿಗೆ ಮಿಲನವನ್ನಾಚರಿಸಲು ಸಾಕಾರದಲ್ಲಾಗಿರಬಹುದು ಅಥವಾ ಆಕಾರದಲ್ಲಾಗಿರಬಹುದು. ಅದಕ್ಕಾಗಿ ಬ್ರಹ್ಮಾರವರ ಆಧಾರವನ್ನು ತೆಗೆದುಕೊಳ್ಳಲೇಬೇಕಾಗುವುದು. ಬ್ರಹ್ಮಾರವರಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಮಾಧ್ಯಮವಿಲ್ಲದೆ ಸಾಕಾರ ಮಿಲನವನ್ನು ಆಚರಿಸಲು ಸಾಧ್ಯವಿಲ್ಲ. ಅಂದಮೇಲೆ ಮಕ್ಕಳ ಮೇಲೆ ತಂದೆಗೆ ಎಷ್ಟೊಂದು ಪ್ರೀತಿಯಿದೆ ಹಾಗೂ ಮಕ್ಕಳಿಗೆ ತಂದೆಯ ಮೇಲೆ ಇದೆಯೇ! ಒಬ್ಬರಿಗೊಬ್ಬರಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಒಂದುವೇಳೆ ತಂದೆಯನ್ನು ಬದಿಗಿಡಲಾಯಿತು, ಜೊತೆಯಲ್ಲಿ ಇಟ್ಟುಕೊಳ್ಳದಿದ್ದರೆ ಒಬ್ಬರೇ ಏನಾದರೂ ಮಾಡಲು ಸಾಧ್ಯವೇ! ತಂದೆಯು ಮಾಡಲು ಸಾಧ್ಯವೇ? ತಂದೆಯೂ ಸಹ ಮಾಡಲು ಸಾಧ್ಯವಿಲ್ಲ. ಅಂದಮೇಲೆ ಇದು ತಂದೆ ಹಾಗೂ ಮಕ್ಕಳು ಜೊತೆಜೊತೆ ದಿವ್ಯ ಜನ್ಮವನ್ನು ಪಡೆಯುವುದು, ಜೊತೆ-ಜೊತೆಗೆ ವಿಶ್ವ ಪರಿವರ್ತನೆ ಮಾಡುವುದು ಹಾಗೂ ಜೊತೆ-ಜೊತೆಗೆ ತಮ್ಮ ಮಧುರ ಮನೆಗೆ ಹೋಗುವುದು- ಇದು ಡ್ರಾಮಾದ ಅವಿನಾಶಿ ನೊಂದಣಿಯಾಗಿದೆ. ಇದನ್ನು ಯಾರೂ ಸಹ ಬದಲಾಯಿಸುವುದಕ್ಕೆ ಸಾಧ್ಯವಿಲ್ಲ ಅಂದಮೇಲೆ ಈ ನೊಂದಣಿ ಒಳ್ಳೆಯದಲ್ಲವೆ. ಪ್ರಿಯವಾಗಿದೆ ಅಲ್ಲವೇ? ಹಾಗಾದರೆ ಇಂದು

ಎಲ್ಲರೂ ತಂದೆಯ ಜನ್ಮದಿನವನ್ನು ಆಚರಿಸಲು ಬಂದಿದ್ದೀರಾ ಅಥವಾ ತಮ್ಮದೇ? ತಂದೆಯು ತಮ್ಮದೆಂದು ಹೇಳಿದರೆ, ಮಕ್ಕಳು ತಂದೆಯ ಜನ್ಮದಿನವನ್ನು ಆಚರಿಸಲು ಎಂದು ಹೇಳುವರು.

ಇದು ದಿವ್ಯ ಅವತರಣೆ. ಇದಕ್ಕೆ ಶಿವ ಜಯಂತಿ ಅಥವಾ ಶಿವರಾತ್ರಿ ಎಂದು ಹೇಳಲಾಗುವುದು. ಎಷ್ಟೊಂದು ಆತ್ಮರಿಗಾಗಿ ಸ್ನೇಹಮಯ, ಸುಖಮಯ ಅವತರಣೆಯಾಗಿದೆ. ಇಂತಹ ಜಯಂತಿಯು ಸತ್ಯಯುಗದಲ್ಲಿಯೂ ಆಚರಿಸುವುದಿಲ್ಲ. ಆತ್ಮರ ಜಯಂತಿಯನ್ನು ಆಚರಿಸಲಾಗುತ್ತದೆ ಆದರೆ ಈ ಸಮಯದಲ್ಲಿ ಆತ್ಮರು ಪರಮಾತ್ಮನ ಜಯಂತಿಯನ್ನಾಚರಿಸುತ್ತಾರೆ. ಇಡೀ ಕಲ್ಪದಲ್ಲಿ ಈ ಅದ್ಭುತವಾದ ಜಯಂತಿಯು ಇದೊಂದೇ ಸಮಯದಲ್ಲಿ ತಂದೆಯ ಜಯಂತಿ ಹಾಗೂ ಮಕ್ಕಳ ಜಯಂತಿಯು ಅತೀತ ಹಾಗೂ ಪ್ರಿಯವಾಗಿ, ಒಟ್ಟಿಗೆ ಆಗುವುದು. ಈ ರೀತಿ ಎಂದಾದರೂ ಆಗುವುದೇ? ಒಂದುವೇಳೆ ದಿನಾಂಕವೂ ಒಂದೇ ಆಗಿರಬಹುದು. ವರ್ಷದ ಅಥವಾ ತಿಂಗಳಿನ ಅಥವಾ ದಿನಾಂಕದ ಅಂತರವಾಗುತ್ತದೆ. ಆದರೆ ಈ ಅವತರಣೆಯ ದಿನವು ಎಷ್ಟೊಂದು ಅದ್ಭುತವಾಗಿದೆ. ಇದರಲ್ಲಿ ತಂದೆ ಹಾಗೂ ಮಕ್ಕಳ ಜಯಂತಿಯು ಒಟ್ಟಿಗೆ ಆಚರಿಸಲಾಗುತ್ತದೆ.

ಈ ಸ್ಮೃತಿಚಿಹ್ನೆಯ ದಿನದಂದು ವಿಶೇಷವಾಗಿ ಭಕ್ತರೂ ಸಹ ಎರಡು ವಿಶೇಷತೆಗಳಿಂದ ಆಚರಿಸುತ್ತಾರೆ. ಆ ಎರಡು ವಿಶೇಷತೆಗಳು ಯಾವುವು? ಒಂದು ವಿಶೇಷವಾಗಿ ವ್ರತವನ್ನಿಡುತ್ತಾರೆ ಹಾಗೂ ಇನ್ನೊಂದು ಸ್ವಯಂನ್ನು ಸಮರ್ಪಣೆ ಮಾಡದೆ, ಬೇರೆ ಯಾವುದನ್ನಾದರೂ ಬಲಿ ಕೊಡುತ್ತಾರೆ. ಅಂದಾಗ ಬಲಿ ಕೊಡುವುದು ಹಾಗೂ ವ್ರತ ಧಾರಣೆ ಮಾಡುವುದು ಇವೆರಡು ಈ ದಿನದ ವಿಶೇಷತೆಯಾಗಿದೆ. ಅನೇಕ ಪ್ರಕಾರದ ವ್ರತ ಧಾರಣೆ ಮಾಡುತ್ತಾರೆ. ಕೆಲವರು ಭೋಜನದ ವ್ರತ ಮಾಡುತ್ತಾರೆ. ಕೆಲವರು ಜಾಗರಣೆ ಮಾಡುತ್ತಾರೆ. ಕೆಲವರು ದೂರ ದೂರದಿಂದ ಪಾದಯಾತ್ರೆಯ ವ್ರತ ಮಾಡುತ್ತಾರೆ, ಎಷ್ಟೇ ಸುಸ್ತಾದರೂ ಸಹ ವ್ರತವನ್ನು ಪೂರ್ಣಗೊಳಿಸುತ್ತಾರೆ. ಅದಕ್ಕಾಗಿ ಎಷ್ಟೇ ದಿನಗಳಾದರೂ ಆಗಲಿ, ಎಷ್ಟೇ ಸಮಯವಾದರೂ ವ್ರತವನ್ನು ಮಾತ್ರ ಬಿಡುವುದಿಲ್ಲ. ಹಾಗಾದರೆ ಈ ಸ್ಮೃತಿಚಿಹ್ನೆಯನ್ನು ಯಾರಿಂದ ಕಾಪಿ ಮಾಡಿದ್ದಾರೆ? ತಮ್ಮದು ಬ್ರಾಹ್ಮಣ ಜೀವನದ ವ್ರತವಾಗಿದೆ ಮತ್ತು ಭಕ್ತರದು ಒಂದು ದಿನದ ವ್ರತವಾಗಿದೆ. ತಾವೂ ಸಹ ಯಾವಾಗ ಬ್ರಾಹ್ಮಣ ಜನ್ಮ ಅಥವಾ ದಿವ್ಯ ಜನ್ಮವನ್ನು ಪಡೆದುಕೊಳ್ಳಲಾಯಿತೋ ಆಗ ಯಾವ ವ್ರತವನ್ನು ತೆಗೆದುಕೊಳ್ಳಲಾಯಿತು? ಸದಾ ಅಜ್ಞಾನದ ನಿದ್ರೆಯಿಂದ ಜಾಗರಣೆಯ ವ್ರತವನ್ನು ತೆಗೆದುಕೊಳ್ಳಲಾಯಿತಲ್ಲವೆ ಅಥವಾ ಸ್ವಲ್ಪ-ಸ್ವಲ್ಪ ನಿದ್ರೆಯನ್ನೂ ಮಾಡುತ್ತೇವೆ ಎಂಬ ವ್ರತ ತೆಗೆದುಕೊಳ್ಳಲಾಯಿತೇ? ಅಥವಾ ಸ್ವಲ್ಪ-ಸ್ವಲ್ಪ ತೂಕಡಿಸುವುದನ್ನಂತು ಮಾಡಲಿಲ್ಲವೇ? ತಾವೆಲ್ಲರೂ ಸಹ ಶಿವ ಜಯಂತಿ ಅಥವಾ ದಿವ್ಯ ಜನ್ಮದಂದು ಜಾಗರಣೆಯ ವ್ರತವನ್ನು ತೆಗೆದುಕೊಂಡಿದ್ದೀರಿ ಆದ್ದರಿಂದ ಭಕ್ತರೂ ಸಹ ಸ್ಮೃತಿಚಿಇಹ್ನೆಯ ರೂಪದಲ್ಲಿ ಜಾಗರಣೆ ಮಾಡುತ್ತಾರೆ. ಮತ್ತು ತಾವೆಲ್ಲರೂ ಶುದ್ಧ ಭೋಜನದ ವ್ರತವನ್ನು ತೆಗೆದುಕೊಂಡಿರುವ ಕಾರಣ, ಭಕ್ತರೂ ಸಹ ಏನೇ ಆದರೂ, ರೋಗಿಯಾಗಿದ್ದರೂ ಅನ್ನದ ವ್ರತವನ್ನು ಬಿಡುವುದಿಲ್ಲ. ಹಾಗಾದರೆ ತಾವೆಲ್ಲರೂ ಮನಸ್ಸಿನಲ್ಲಿ, ತನುವಿನ ಮುಂದೆ ಪರಿಸ್ಥಿತಿಗಳೇ ಬಂದರೂ ವ್ರತವನ್ನು ಭಂಗ ಮಾಡುವಿರೇನು? ಯಾರೂ ಸಹ ನೋಡುವುದಿಲ್ಲ. ತಿನ್ನೋಣ! ಸ್ವಲ್ಪ ಸೇವನೆಯನ್ನು ಮಾಡೋಣ- ಈ ರೀತಿ ಮಾಡುತ್ತೀರಾ? ತಮ್ಮ ನಿಯಮವನ್ನು ಪರಿಪಕ್ವವಾಗಿ ಇಡುತ್ತೀರಲ್ಲವೇ? ಅಥವಾ ಕಚ್ಚಾ ಆಗಿದ್ದೀರಾ? ಕೆಲವೊಮ್ಮೆ ತಿನಿಸುಗಳನ್ನು ನೋಡುತ್ತಾ ಸ್ವಲ್ಪ

ಮನಸ್ಸಾಗುವುದೇ? ಒಂದೇ ರೀತಿಯ ಆಹಾರ ಸೇವನೆ ಮಾಡುತ್ತಾ-ಮಾಡುತ್ತಾ. ಕೆಲವೊಮ್ಮೆ ವಿಭಿನ್ನವಾದ ತಿನಿಸಿನಲ್ಲಿ ಮನಸ್ಸಾಗುವುದೇ? ಒಳ್ಳೆಯದು- ಇದರಲ್ಲಿ ಅಮೇರಿಕಾ, ಆಸ್ಟ್ರೇಲಿಯಾ, ಯುರೋಪ್, ಏಷ್ಯಾ ಅಥವಾ ರಷ್ಯಾದವರು ಎಲ್ಲರೂ ಪರಿಪಕ್ವವಾಗಿದ್ದೀರಲ್ಲವೇ? ಅಥವಾ ಸ್ವಲ್ಪ-ಸ್ವಲ್ಪ ಅಪರಿಪಕ್ವ ಆಗಿದ್ದೀರಾ?

ಹಾಗಾದರೆ ಡಬಲ್ ವಿದೇಶಿಗಳೆಲ್ಲರೂ ಉತ್ತೀರ್ಣರಾಗಿದ್ದೀರಾ! ಮತ್ತು ಭಾರತದವರಂತೂ ಆಗಲೇ ಉತ್ತೀರ್ಣರಾಗಿರುತ್ತೀರಿ ಅಲ್ಲವೇ! ಭಾರತದವರಿಗಂತು ಸಹಜವಾಗಿದೆ. ಡಬಲ್ ವಿದೇಶಿಗಳಿಗೆ ಡಬಲ್ ಪರಿಶ್ರಮವೂ ಇದೆ. ಆದರೆ ಉತ್ತೀರ್ಣರಾಗಿರುವುದಕ್ಕೆ ಶುಭಾಷಯಗಳು. ಒಂದು ಜಯಂತಿಯ ಶುಭಾಷಯಗಳು. ಇನ್ನೊಂದು ಉತ್ತೀರ್ಣರಾಗಿರುವ ಶುಭಾಷಯಗಳು, ಮತ್ತೊಂದು ಎಂದಿಗೂ ಏರುಪೇರಿನಲ್ಲಿ ಬರಬಾರದು ಸದಾ ಅಚಲರಾಗಿರಬೇಕು. ಇದರಲ್ಲಿ ಉತ್ತೀರ್ಣರಾಗಿದ್ದೀರಾ? ಇದರಲ್ಲಿ ಏನು ಮಾಡಲಿ! ಕೆಲವೊಮ್ಮೆ! ಎಂದು ಹೇಳಿಬಿಡುತ್ತಾರೆ. ಇಂದು ಬಾಪ್‍ದಾದಾರವರು ಡಬಲ್ ವಿದೇಶಿಯರಿಗಾಗಿ ಬಹಳ ರಮಣೀಕ ಭಾಷೆಯನ್ನು ಇಮರ್ಜ್ ಮಾಡಿದರು. ಏಕೆಂದರೆ ಡಬಲ್ ವಿದೇಶಿಯರು ಖುಷಿಯಾಗಿರುವುದು ಬಹಳ ಇಷ್ಟಪಡುತ್ತಾರಲ್ಲವೆ! ಏನಾದರೂ ಆಗಲಿ, ಸ್ವಲ್ಪ ಎಂಜಾಯ್ ಇರಬೇಕು, ಶಾಂತಿ-ಶಾಂತಿ ಎಂದು ಹೇಗಿರುವುದು! ಇದಕ್ಕಾಗಿ ಬಾಪ್‍ದಾದಾರವರು ಶಿವರಾತ್ರಿಯೆಂದು ಈ ಶಬ್ಧಗಳ ಧೃಡ ವ್ರತವನ್ನು ಎಲ್ಲರಿಂದ ಮಾಡಿಸುತ್ತಾರೆ. ವ್ರತವನ್ನು ತೆಗೆದುಕೊಳ್ಳುವುದಕ್ಕಾಗಿ ತಯಾರಿದ್ದೀರಾ? ಅಥವಾ ಯಾವಾಗ ಕೇಳುತ್ತಾರೆಯೋ ಆಗಮಾತ್ರ ಹೇಳುತ್ತೀರಾ- ಇದಂತು ಸ್ವಲ್ಪ, ಸ್ವಲ್ಪ ಕಷ್ಟವಿದೆ! ಮೊಟ್ಟಮೊದಲು ಕಷ್ಟ, ಪರಿಶ್ರಮ ಶಬ್ದವನ್ನು ಸಂಕಲ್ಪದಲ್ಲಿಯೂ ತರುವುದಿಲ್ಲ- ಈ ವ್ರತ ತೆಗೆದುಕೊಳ್ಳುವುದಕ್ಕಾಗಿ ತಯಾರಿದ್ದೀರಾ? ಇದರಲ್ಲಿ ಬಾಪ್‍ದಾದಾರವರು ನೋಡಿದರು- ಎಲ್ಲಿಯವರೆಗೆ ಸಂಕಲ್ಪದಲ್ಲಿ ಧೃಡತೆಯಿರುವುದಿಲ್ಲವೋ ಅಲ್ಲಿಯವರೆಗೆ ಸಫಲತೆ ಆಗುವುದಿಲ್ಲ. ಸಫಲತೆ ಆಗುತ್ತದೆ ಆದರೆ ಧೃಡವಾಗಿರದ ಕಾರಣ ಬಲಹೀನತೆ ಬರುತ್ತದೆ. ಬಹಳಷ್ಟು ಮಕ್ಕಳು ಏನು ಮಾಡಲಿ! ಏನು! ಎಂಬ ಬಲಹೀನ ಮಾತುಗಳನ್ನಾಡುತ್ತಿರುತ್ತಾರೆ. ಈಗಿನಿಂದ "ಏನು" ಎನ್ನಬಾರದು ಆದರೆ ಬದಲಾಗಿ ಏನುಹೇಳುವಿರಿ? ಫ್ಲೈ(ಹಾರುವುದು) ಎನ್ನಿರಿ, ಯಾವಾಗ ಏನು ಎಂಬ ಶಬ್ದವು ಬರುತ್ತದೆಯೋ ಆಗ ಬ್ರಾಹ್ಮಣ ಶಬ್ಧಕೋಶದಲ್ಲಿ ಈ ಏನು ಎನ್ನುವುದಕ್ಕೆ ಬದಲಾಗಿ ಹಾರುವುದು ಎಂಬ ಶಬ್ದವಿದೆ. ಇನ್ನೊಂದು ಶಬ್ದವನ್ನೇನು ಹೇಳುತ್ತಾರೆ? ಏಕೆ, ಇದನ್ನೇನು ಮಾಡುವಿರಿ? ಬಾಯ್-ಬಾಯ್ ಸದಾಕಾಲಕ್ಕಾಗಿ ಬೀಳ್ಕೊಡುವಿರಾ ಅಥವಾ ಸ್ವಲ್ಪ ಸಮಯಕ್ಕಾಗಿಯೇ? ಮತ್ತೊಂದು ಶಬ್ದವೇನು ಹೇಳುವರು? ಹೇಗೆ, ಹೇಗೆ ಇರಬಾರದು, ಹೀಗೆ(know) ಎನ್ನಬೇಕು ಹೀಗೆ ಎಂದರೆ ತಿಳಿದಿರುವವರು. ಯಾವಾಗ ತ್ರಿಕಾಲದರ್ಶಿ ಆಗಿದ್ದೀರಿ, ತಿಳುವಳಿಕೆ ಇರುವವರು ಆದಾಗ ಹೇಗೆ ಎಂದು ಏಕೆ ಕೇಳುತ್ತಿದ್ದೀರಿ? ಹೇಗೆ ಎನ್ನುವುದರ ಅರ್ಥವಾಗಿದೆ- ಗಾಳಿ(ವ್ಯರ್ಥ ಚಿಂತನೆ) ಬರುವುದು. ವ್ಯರ್ಥವು ಪ್ರಿಯವಾಗುವುದೇ? ಇದೇ ಶಬ್ದಗಳ ಕಾರಣವು ಬಲಹೀನತೆಯನ್ನು ತರುತ್ತದೆ. ಇದೇ ಶಬ್ಧಗಳು ವ್ಯರ್ಥದ ದ್ವಾರವನ್ನು ತೆರೆಯುತ್ತದೆ. ಯಾವಾಗ ವ್ಯರ್ಥಸಂಕಲ್ಪಗಳ ಕ್ಯೂ ನಿಲ್ಲುತ್ತದೆಯೋ ಆಗ ಯೋಚಿಸಿ- ಯಾವ ಶಬ್ಧಗಳಿಂದ ಕ್ಯೂ(ಸಾಲು) ನಿಲ್ಲುತ್ತದೆ? ಏಕಾಗುತ್ತದೆ ಅಥವಾ ಏನು ಅಥವಾ ಹೇಗಾಗುತ್ತದೆ. ಇದು ಹೇಗಾಯಿತು! ಇವರೇಕೆ ಹೇಳಿದರು! ಈಗೇನು ಮಾಡುವುದು!... ಹೇಗೆ ಮಾಡುವುದು! ಇದೇ ಶಬ್ದಗಳಿಂದ ಕ್ಯೂ ನಿಲ್ಲುತ್ತದೆ ಅಲ್ಲವೆ! ಹಾಗಾದರೆ ಬಲಹೀನತೆಯ ಅಥವಾ ವ್ಯರ್ಥ ಸಂಕಲ್ಪಗಳ ದ್ವಾರವು ಇವೇ ಶಬ್ದಗಳಾಗಿವೆ. ಇವನ್ನು ಶಬ್ಧಕೋಶದಲ್ಲಿ ಪರಿವರ್ತನೆ

ಮಾಡಿಬಿಡಿ. ಆನಂತರ ಏನಾಗುವುದು? ತಾವೂ ಪರಿವರ್ತನೆ ಆಗಿಬಿಡುತ್ತೀರಲ್ಲವೆ! ಅಂದಾಗ ಭಕ್ತರು ತಮ್ಮನ್ನೇ ಕಾಪಿ ಮಾಡುತ್ತಿದ್ದಾರೆ. ತಮ್ಮದು ಬೇಹದ್ದಿನ ಮಾತಾಗಿದೆ ಮತ್ತು ಅವರು ಅಲ್ಪಕಾಲದ ರೂಪದಲ್ಲಿ ನೆನಪಾರ್ಥವನ್ನಿಟ್ಟಿದ್ದಾರೆ ಹಾಗಾದರೆ ಈ ಧೃಢ ವ್ರತವನ್ನಿಡುವುದೇ ಶಿವ ಜಯಂತಿ ಅಥವಾ ಶಿವರಾತ್ರಿ ಆಚರಿಸುವುದಾಗಿದೆ. ಆಚರಿಸುವುದರ ಅರ್ಥ ತಯಾರಾಗುವುದಾಗಿದೆ. ಇದರ ಹೊರತು ಕೇವಲ ಕೇಕ್ ಕಟ್ ಮಾಡಿದಿರಿ, ದೀಪವನ್ನು ಬೆಳಗಿಸುವುದು ಆಚರಿಸುವುದಲ್ಲ. ಈ ಮನೋರಂಜನೆಯು ಅವಶ್ಯಕವಿದೆ ಆದರೆ ಇದರ ಜೊತೆ-ಜೊತೆಗೆ ಕೆಲವೊಂದನ್ನು ಸಮಾಪ್ತಿ ಮಾಡಬೇಕು ಹಾಗೂ ಕೆಲವೊಂದು ಜಾಗೃತ ಮಾಡಬೇಕಾಗಿದೆ. 1.ಒಂದುಕಡೆ ದೀಪ ಅಥವಾ ಮೊಂಬತ್ತಿಯನ್ನು ಬೆಳಗಿಸುತ್ತೀರಿ. 2.ಇನ್ನೊಂದು ಕಡೆ ಕೇಕ್ ಕಟ್ ಮಾಡುತ್ತೀರಿ, 3.ಮತ್ತೊಂದು ಧ್ವಜಾರೋಹಣ ಮಾಡುತ್ತೀರಿ. 4.ನಾಲ್ಕನೆಯದು ಹಾಡನ್ನಾಡುತ್ತೀರಿ. 5.ಐದನೆಯದು ನೃತ್ಯವನ್ನೂ ಮಾಡುತ್ತೀರಿ. ಮತ್ತೇನು ಮಾಡುತ್ತೀರಿ? ಸಿಹಿಯನ್ನು ಹಂಚುತ್ತೀರಿ ಹಾಗೂ ತಾವೂ ತಿನ್ನುತ್ತೀರಿ. ಹಾಗಾದರೆ ಈಗ ಈ ಆರು ಮಾತುಗಳನ್ನೇ ಮಾಡಬೇಕಾಗುತ್ತದೆ. ಮೊದಲನೆಯದಾಗಿ ತಮ್ಮ ಮನಸ್ಸಿನಲ್ಲೀಗ ಧೃಡತೆಯ ಮೂಲಕ ಸಫಲತೆಯನ್ನು ಪಡೆಯಲೇಬೇಕು ಎಂಬ ಧೃಡಸಂಕಲ್ಪದ ದೀಪವನ್ನು ಬೆಳಗಿಸಿರಿ. ನೋಡೋಣ, ಗೊತ್ತಿಲ್ಲ, ಗೊತ್ತಿಲ್ಲ ಎನ್ನುವುದಿರಬಾರದು ಆಗಲೇಬೇಕು. ಮಾಡಲೇಬೇಕು. ಮತ್ತೊಂದು ಯಾವ ಕೇಕ್‌ನ್ನು ಕಟ್ ಮಾಡುತ್ತೀರಿ? ಇಡೀ ಕೇಕ್‌ನ್ನು ತಿನ್ನುವುದಕ್ಕಾಗುವುದಿಲ್ಲ. ತುಂಡು ಮಾಡಿ ತಿನ್ನಲಾಗುವುದು. ಹಾಗಾದರೆ ಏನನ್ನು ತುಂಡರಿಸುತ್ತೀರಿ? ಸಂಪನ್ನರಾಗುವುದರಲ್ಲಿ ಅಥವಾ ಸಂಪೂರ್ಣರಾಗುವುದರಲ್ಲಿ ಸಂಕಲ್ಪದಲ್ಲಿಯೂ ಯಾವುದೆಲ್ಲಾ ಅಡಚಣೆಗಳಿವೆಯೋ ಅದನ್ನು ಈಗಿನಿಂದ ತುಂಡು ಮಾಡಿರಿ, ಸಮಾಪ್ತಿ ಆಗಿಬಿಡಲಿ. ಯಾವುದೆಲ್ಲಾ ಬಲಹೀನತೆಗಳಿವೆಯೋ ಅದಕ್ಕೆ ಬದಲಾಗಿ ಶಕ್ತಿಯನ್ನು ಧಾರಣೆ ಮಾಡುವ ಕೇಕ್‌ನ್ನು ಬಾಯಲ್ಲಿ ಹಾಕಿಕೊಳ್ಳಿರಿ. ಮೊದಲು ತುಂಡು ಮಾಡಿರಿ ನಂತರ ಸ್ವೀಕರಿಸಿರಿ. ತಿಳಿಯಿತೆ! ಯಾವ ಧ್ವಜಾರೋಹಣ ಮಾಡುವಿರಿ? ನೆನಪಾರ್ಥ ರೂಪದಿಂದ ಈ ಧ್ವಜಾರೋಹಣ ಮಾಡುತ್ತಾರೆ ಆದರೆ ತಮ್ಮ ಹೃದಯದಲ್ಲಿ ಪ್ರತೀ ಸಂಕಲ್ಪ, ಮಾತು ಹಾಗೂ ಕರ್ಮದ ಮೂಲಕ ಸದಾ ತಂದೆಯವರನ್ನು ಪ್ರತ್ಯಕ್ಷಗೊಳಿಸುವ ಧ್ವಜವನ್ನು ಹೃದಯದಲ್ಲಿ ಧ್ವಜಾರೋಹಣ ಮಾಡಿರಿ. ತಂದೆಯನ್ನು ಪ್ರತ್ಯಕ್ಷ ಮಾಡುವುದರಲ್ಲಿ ಯಾವ ಸಂಕಲ್ಪ, ಮಾತು ಮತ್ತು ಕರ್ಮವು ಅಡಚಣೆಯಾಗುತ್ತದೆಯೋ ಅಂತಹದ್ದು ಯಾವುದೂ ಆಗಬಾರದು ಏಕೆಂದರೆ ಎಲ್ಲರ ಹೃದಯದಲ್ಲಿ ತಂದೆಯ ಸ್ನೇಹದ ಕಾರಣ ಇದೇ ಸಂಕಲ್ಪವಿದೆ- ತಂದೆಯನ್ನು ಪ್ರತ್ಯಕ್ಷ ಮಾಡಬೇಕು. ಹಾಗಾದರೆ ಹೇಗೆ ಮಾಡುವಿರಿ? ತಮ್ಮ ಸಂಕಲ್ಪ, ಮಾತು ಹಾಗೂ ಕರ್ಮದ ಮೂಲಕ ಸದಾ ಹೃದಯದಲ್ಲಿ ಪ್ರತ್ಯಕ್ಷಗೊಳಿಸುವ ಧ್ವಜಾರೋಹಣ ಹಾಗೂ ಸದಾ ಖುಷಿಯಾಗಿರುವ ನರ್ತನೆ ಮಾಡುತ್ತಿರಿ. ಕೆಲವೊಮ್ಮೆ ಖುಷಿ, ಕೆಲವೊಮ್ಮೆ ದುಃಖಿ ಹೀಗಾಗಬಾರದು. ಯಾವಾಗ ಹೀಗಾಗುತ್ತೀರೋ ಆ ಸಮಯದಲ್ಲಿಯೂ ತಮ್ಮದೊಂದು ಭಾವಚಿತ್ರವನ್ನು ತೆಗೆದುಕೊಳ್ಳಿರಿ, ಮತ್ತೆ ಯಾವಾಗ ಖುಷಿಯಾಗಿ ಇರುತ್ತೀರೋ ಆಗಲೂ ಭಾವಚಿತ್ರವನ್ನು ತೆಗೆದುಕೊಳ್ಳಿರಿ. ನಂತರ ಎರಡೂ ಭಾವಚಿತ್ರಗಳನ್ನು ಜೊತೆಗಿಡಿ, ಯಾವುದು ಚೆನ್ನಾಗಿದೆ? ನಾನು ಇದಾ ಅಥವಾ ಅದಾ? ಎನ್ನುವುದನ್ನು ನೋಡಿರಿ. ಸದಾ ಖುಷಿಯಾಗಿರುವ, ಹರ್ಷಿತವಾಗಿರುವ ನೃತ್ಯ ಮಾಡಿರಿ. ಏನೇ ಆಗಲಿ, ಯಾರೆಷ್ಟೇ ಖುಷಿಯನ್ನು ಕಸಿದುಕೊಳ್ಳಲು ಪ್ರಯತ್ನವನ್ನೇ ಮಾಡಲಿ, ಏಕೆಂದರೆ ಮಾಯೆಯು ಯಾವುದೋ ಒಂದರ ಮೂಲಕವೇ ಮಾಡಿಸುತ್ತದೆ ಅಲ್ಲವೆ! ಏನೇ ಆಗಲಿ, ಯಾರೆಷ್ಟೇ ಯಾವುದೇ ಪ್ರಕಾರದಲ್ಲಿ ಖುಷಿ ಕಡಿಮೆ ಮಾಡುವ ಅಥವಾ ಖುಷಿಯನ್ನು ಕಸಿದುಕೊಳ್ಳುವ ಪ್ರಯತ್ನವನ್ನೇ ಮಾಡಲಿ ಆದರೆ ಎಲ್ಲಿಯವರೆಗೆ ಬದುಕಿರುತ್ತೇವೆಯೋ ಅಲ್ಲಿಯವರೆಗೆ ಖುಷಿಯಾಗಿರಬೇಕು-

ಇದರ ಪರಿಪಕ್ವ ವ್ರತವನ್ನು ತೆಗೆದುಕೊಂಡಿದ್ದೀರಿ ಅಲ್ಲವೇ. ಏಕೆ ಮಾಡಲಾಗುವುದಿಲ್ಲ? ನಿಮ್ಮ ಹತ್ತಿರ ವಿಲ್ ಪವರ್ ಇದೆಯಲ್ಲವೆ! ಯಾರ ಬಳಿ ವಿಲ್ ಪವರ್ ಇದೆಯೋ ಅವರು ಏನನ್ನಾದರೂ ಮಾಡಬಹುದು. ಒಂದುವೇಳೆ ತಾವು ಮಾಸ್ಟರ್ ಸರ್ವಶಕ್ತಿವಂತರೇ ಮಾಡಲು ಸಾಧ್ಯವಿಲ್ಲದಿದ್ದರೆ ಮತ್ತಾರು ಮಾಡುವರು! ಮತ್ಯಾರಾದರೂ ಜನ್ಮ ಪಡೆಯುವವರಿದ್ದಾರೆಯೇ? ಅಥವಾ ತಾವೇ ಆಗಿದ್ದೀರಾ? ಮಾಲೆಯ ಮಣಿಗಳೂ ಸಹ ತಾವೇ ಆಗಬೇಕೇ ಅಥವಾ ಅನ್ಯರ ನಿರೀಕ್ಷಣೆ ಮಾಡುತ್ತಿದ್ದೀರಾ? ಮೊದಲ ದರ್ಜೆ(ಫಸ್ಟ್ ಡಿವಿಜನ್)ಯಲ್ಲಿ ಬರುವವರಲ್ಲವೆ! ಅಥವಾ ಸೆಕೆಂಡ್ ದರ್ಜೆಯಲ್ಲಾದರೂ ಪರವಾಗಿಲ್ಲವೇ? ಹಾಗಾದರೆ ಎಲ್ಲಿಯವರೆಗೆ ಜೀವಂತವಾಗಿ ಇರುತ್ತೇವೆಯೋ ಅಲ್ಲಿಯವರೆಗೆ ಖುಷಿಯಾಗಿರುತ್ತೇವೆ ಎಂಬ ದೃಢ ಸಂಕಲ್ಪವನ್ನಿಡಿ. ಹಾಗೂ ಯಾರು ಖುಷಿಯಾಗಿರುತ್ತಾರೆಯೋ ಅವರು ಖುಷಿಯ ಮಿಠಾಯಿಯನ್ನು ಹಂಚುತ್ತಿರುತ್ತಾರೆ. ಆ ಸ್ಥೂಲ ಮಿಠಾಯಿಯಿಂದ ಕೇವಲ ಬಾಯಿ ಸಿಹಿಯಾಗುತ್ತದೆ ಮತ್ತು ಇದರಿಂದ ಮನ, ತನು, ಹೃದಯ ಎಲ್ಲವೂ ಖುಷಿಯಾಗಿಬಿಡುತ್ತದೆ ಹಾಗಾದರೆ ಈ ಮಿಠಾಯಿಯನ್ನು ಹಂಚಬೇಕಾಗಿದೆ. ಮತ್ತು ಸದಾ ಯಾವ ಹಾಡನ್ನಾಡುತ್ತೀರಿ? ನನ್ನ ಬಾಬಾ, ಪ್ರೀತಿಯ ಬಾಬಾ, ಮಧುರವಾದ ಬಾಬಾ ಇದೇ ಹಾಡನ್ನು ಹಾಡುತ್ತೀರಲ್ಲವೆ! ಸದಾ ಈ ಹಾಡು ಸ್ವತಹವಾಗಿ ಮೊಳಗುತ್ತಿರಲಿ. ಶಕ್ತಿ ಕಡಿಮೆಯಾದ ಕೂಡಲೇ ಹಾಡು ನಿಲ್ಲಬಾರದು. ಯಾವಾಗ ಬ್ಯಾಟರಿ(ಶಕ್ತಿ) ನಿಧಾನವಾಗುತ್ತದೆಯೋ ಆಗ ಹೇಗೆ ಹಾಡನ್ನು ಹಾಡುತ್ತೀರಿ ಎಂಬುದು ತಿಳಿದಿದೆಯೇ? ಎಲ್ಲರಿಗೂ ಇದರ ಅನುಭವವಂತೂ ಇದೆಯಲ್ಲವೆ, ಮತ್ತೇನಾಗುತ್ತದೆ? ನನ್ನವರಂತು ಬಾಬಾ ಆಗಿದ್ದಾರೆ, ನನ್ನವರಂತೂ ಬಾಬಾನೇ ಆಗಿದ್ದಾರೆ ಆದರೆ ಕೇವಲ ನನ್ನ ಬಾಬಾ ಎಂದು ಹೇಳುವುದಿಲ್ಲ. ನನ್ನವರಂತು ಬಾಬಾ ಆದರೆ....ಎಂದಾಗ ಮಿಕ್ಸ್ ಆಯಿತಲ್ಲವೆ, ಬ್ಯಾಟರಿ ನಿಧಾನವಾದಾಗ ಧ್ವನಿಯು ನಿಧಾನವಾಗಿ ಬರುತ್ತದೆ ಮತ್ತು ಅದರಲ್ಲಿ ನನ್ನವರಂತು ಬಾಬಾನೇ ಆದರೆ ಎಂಬ ಶಬ್ದ ಸೇರ್ಪಡೆ ಆಗಿಬಿಡುತ್ತದೆ. ನನ್ನ ಬಾಬಾ ಎಂದು ಗಟ್ಟಿಯಾಗಿ, ನಶೆಯಿಂದ ಹೇಳುವುದಿಲ್ಲ. ಶಿವರಾತ್ರಿ ಆಚರಿಸುವುದೆಂದರೆ ಈ ಧೃಡ ವ್ರತವನ್ನಿಡುವುದು. ಇಂತಹ ಶಿವರಾತ್ರಿ ಆಚರಿಸಿದಿರಾ? ಅಥವಾ ಯೋಚಿಸಿದ ನಂತರ ಉತ್ತರ ಕೊಡುವಿರಾ? ಒಳ್ಳೆಯದು- ಬಹಳ ಬುದ್ಧಿವಂತರಾಗಿದ್ದೀರಿ. ಈಗೀಗ ಚಿಂತನೆ ಮಾಡಿಬಿಟ್ಟಿರಿ. ಡಬಲ್ ವಿದೇಶಿಗಳಾಗಿದ್ದೀರಿ ಆದ್ದರಿಂದ ಡಬಲ್ ಬುದ್ಧಿವಂತರಾಗಿದ್ದೀರಿ. ಒಳ್ಳೆಯದು!

ಡಬಲ್ ವಿದೇಶಿಯರು ಮಧುಬನದಲ್ಲಿ ಯಾವ ವಿಶೇಷತೆಯನ್ನು ನೋಡಿದಿರಿ? ಏನು ಮಾಡಿದಿರಿ? ಬ್ರಹ್ಮಾ ತಂದೆಯನ್ನು ಪ್ರತ್ಯಕ್ಷಗೊಳಿಸಿದಿರಿ. ಸ್ಟಾಂಪ್‌ನ ಕಾರ್ಯಕ್ರಮವನ್ನು ಆಚರಿಸಿದಿರಿ. ವಿಶೇಷ ಯೋಗವನ್ನೂ ಮಾಡಿದಿರಲ್ಲವೆ. ಶಕ್ತಿಶಾಲಿ ಯೋಗವನ್ನು ಮಾಡಿದ್ದೀರೆಂದರೆ ವಿಘ್ನ ವಿನಾಶಕರಾಗಿದ್ದೀರಲ್ಲವೆ. ಭಲೆ ಮಧುಬನ ನಿವಾಸಿಗಳ ಯೋಗವಾಗಿರಬಹುದು, ಡಬಲ್ ವಿದೇಶಿಗಳಾಗಿರಬಹುದು, ಅಥವಾ ನಾಲ್ಕೂ ಕಡೆಯಲ್ಲಿರುವ ಬ್ರಾಹ್ಮಣ ಮಕ್ಕಳ ಯೋಗವು ಚಮತ್ಕಾರ ಮಾಡಿದೆಯಲ್ಲವೆ ಏಕೆಂದರೆ ನಾಲ್ಕೂ ಕಡೆಯಲ್ಲಿರುವ ಎಲ್ಲರಲ್ಲಿಯೂ ಒಂದೇ ಸಂಕಲ್ಪವಿತ್ತು- ಬ್ರಹ್ಮಾ ತಂದೆಯನ್ನು ಪ್ರತ್ಯಕ್ಷ ಮಾಡಲೇಬೇಕು. ನಂತರ ಕೆಲವರು ಓಡಾಟದ ಸೇವೆಯನ್ನು ಮಾಡಿದರು. ಕೆಲವರು ಮನಸಾ ಸೇವೆ ಮಾಡಿದರು. ಕೆಲವರು ವಾಚಾ ಸೇವೆ ಮಾಡಿದ್ದಾರೆ ಆದರೆ ಯಾರೆಲ್ಲರೂ ಯೋಗಯುಕ್ತರಾಗಿದ್ದು ಸೇವೆಯನ್ನು ಮಾಡಿದ್ದಾರೆಯೋ ಅಂತಹ ಸೇವಾಧಾರಿಗಳ ಸಫಲತೆಗಾಗಿ ಶುಭಾಷಯಗಳು. ಎಷ್ಟೊಂದು ಖುಷಿಯಾಯಿತು! ಏಕೆಂದರೆ

ಬ್ರಹ್ಮಾ ತಂದೆಯವರೊಂದಿಗೆ ಎಲ್ಲರಿಗೂ ಹೃದಯದ ಅತಿಸೂಕ್ಷ್ಮ ವಾದ ಪ್ರೀತಿಯಿದೆ. ಎಲ್ಲರೂ ಬ್ರಹ್ಮಾ ತಂದೆಯನ್ನು ನೋಡಿದ್ದೀರಾ ಅಥವಾ ತಿಳಿದುಕೊಂಡಿದ್ದೀರಾ? ನೋಡಿದ್ದೇವೆ ಎಂದು ಹೇಳುತ್ತೀರಾ ಅಥವಾ ತಿಳಿದುಕೊಂಡಿದ್ದೇವೆ ಎನ್ನುವಿರಾ? ನಾವು ನೋಡಿದ್ದೇವೆ ಎಂದು ಯಾರು ಹೇಳುವಿರೋ ಅವರು ಕೈ ಮೇಲೆ ಮಾಡಿರಿ. ನಾವು ತಿಳಿದುಕೊಂಡಿದ್ದೇವೆ ಆದರೆ ಈಗ ನಾವು ನೋಡಬೇಕು ಎನ್ನುವವರು ಕೈ ಮೇಲೆ ಮಾಡಿರಿ. (ಸ್ವಲ್ಪ ಮಂದಿ ಕೈ ಮೇಲೆ ಮಾಡಿದರು) ಒಳ್ಳೆಯದು- ಅನುಭವ ಮಾಡಿದ್ದೀರಾ? ಬ್ರಹ್ಮಾರವರು ನಮ್ಮ ತಂದೆಯಾಗಿದ್ದಾರೆ ಎನ್ನುವುದನ್ನು ಅನುಭವ ಮಾಡಿದಿರಾ? ಏಕೆಂದರೆ ಅನುಭವವೂ ಸಹ ಒಂದು ನೇತ್ರವಾಗಿದೆ. ಹೇಗೆ ಸ್ಥೂಲ ನೇತ್ರಗಳಿಂದ ನೋಡುತ್ತೀರಿ, ಅದಕ್ಕಿಂತಲೂ ಶ್ರೇಷ್ಠವಾದ ನೇತ್ರ ಅನುಭವದ ನೇತ್ರವಾಗಿದೆ. ಅನುಭವದ ಕಣ್ಣುಗಳಿಂದ ನೋಡಿದರೂ ಸಹ ನೋಡಿದೆವು ಎಂದು ಹೇಳುತ್ತಾರೆ. ಒಂದುವೇಳೆ ಅನುಭವವೇ ಮಾಡಲಿಲ್ಲ ಮತ್ತು ಅವ್ಯಕ್ತ ರೂಪದಿಂದ, ಅವ್ಯಕ್ತ ಸ್ಥಿತಿಯ ಮೂಲಕ ನೋಡಿರದಿದ್ದರೆ ತಮ್ಮ ಹೆಸರನ್ನು ದಾದಿಯವರಿಗೆ ನೋಟ್ ಮಾಡಿಸಿರಿ, ಅವರು ಅನುಭವ ಮಾಡಿಸುವರು. ಹಾಗೆಯೇ ಉಳಿದುಕೊಳ್ಳಬಾರದು ಏಕೆಂದರೆ ಸ್ಟಾಂಪ್ ನ ಮೂಲಕ ಅನ್ಯರಿಗೆ ಬ್ರಹ್ಮಾತಂದೆಯ ಅನುಭವ ಮಾಡಿಸುತ್ತಿದ್ದೀರಿ. ಮತ್ತೆ ತಾವೇ ಮಾಡದಿದ್ದರೆ ಚೆನ್ನಾಗಿರುವುದಿಲ್ಲ ಅಲ್ಲವೆ. ಆದ್ದರಿಂದ ಯಾವಾಗ ಬ್ರಹ್ಮಾ ತಂದೆಯ ಚಿತ್ರದ ಮುಂದೆ ಕುಳಿತುಕೊಳ್ಳುತ್ತೀರೋ ಆಗ ಚಿತ್ರದಿಂದ ಚೈತನ್ಯ ಮಿಲನದ ಅನುಭವದ ಅನುಭೂತಿ ಆಗುತ್ತಿಲ್ಲವೇ? ಆತ್ಮಿಕ ಸಂಭಾಷಣೆಗೆ ಪ್ರತ್ಯುತ್ತರ ಸಿಗುತ್ತಿಲ್ಲವೇ. ಸಿಗುತ್ತಿದೆ ತಾನೆ! ಅವರು ನಿಮ್ಮ ತಂದೆಯಾದ ಕಾರಣವೇ ಕೇಳುತ್ತಾರೆ ಮತ್ತು ಪ್ರತ್ಯುತ್ತರವನ್ನು ಕೊಡುತ್ತಾರೆ. ಆದ್ದರಿಂದ ಈ ಅನುಭವದಿಂದ ವಂಚಿತರಾಗಿ ಉಳಿದುಕೊಳ್ಳಬಾರದು. ತಿಳಿಯಿತೇ ಎಲ್ಲರೂ ಯಾವ ಸೇವೆಯನ್ನಾದರೆ ಮಾಡುತ್ತಿರುವಿರೋ ವಿಶೇಷವಾಗಿ ಭಾರತವಾಸಿಯರು ಬಹಳಷ್ಟು ಸೇವೆಯ ಅವಕಾಶವನ್ನು ಪಡೆದಿದ್ದೀರಿ. ಬಾಪ್‌ದಾದಾ ಹೆಸರು ಹೇಳುತ್ತಿಲ್ಲ ಆದರೆ ಎಲ್ಲರೂ ಮಾಡಿರುವ ಸೇವೆಯ ಫಲವಾಗಿ ನಿಮ್ಮ ನಿಮ್ಮ ಹೆಸರು ಹೆಸರಿಗೆ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಡಬಲ್ ವಿದೇಶಿಯರಿಗೆ ಕೂಡ ಸೇವೆಯ ಅವಕಾಶ ಲಭಿಸಿದೆ. ಚೆನ್ನಾಗನಿಸುತ್ತಿದೆ ತಾನೆ? ನೃತ್ಯ ಮಾಡುತ್ತಿದ್ದೀರಿ ತಾನೆ. ಒಳ್ಳೆಯದು.

**ನಾಲ್ಕಾರು ಕಡೆ ಇರುವ ಬ್ರಾಹ್ಮಣ ಜನ್ಮದ ದಿವ್ಯಜನ್ಮದ ಅಧಿಕಾರಿ ಆತ್ಮರಿಗೆ, ಸದಾ ತಂದೆ ಮತ್ತು ನೀವು ಜೊತೆಜೊತೆಗೆ ಇರುವ ಸಮೀಪಾತ್ಮರಿಗೆ, ಸದಾ ಡಬಲ್ ಪೂಜ್ಯ ಸ್ವರೂಪದ ಸ್ಮೃತಿಯಲ್ಲಿರುವ ಸಮರ್ಥ ಆತ್ಮರಿಗೆ, ಸದಾ ದೃಢ ಸಂಕಲ್ಪ ಅಥವಾ ದೃಢ ವೃತವನ್ನು ಮಾಡುವ ಸಫಲತೆಯ ಅಧಿಕಾರಿ ಆತ್ಮರಿಗೆ, ಸದಾ ಖುಷಿಯಿಂದ ಇರುವ ಮತ್ತು ಇತರರನ್ನು ಖುಷಿಪಡಿಸುವ ಅದೃಷ್ಟವಂತರಾದ ಮಕ್ಕಳಿಗೆ, ತ್ರಿದೇವ ಮತ್ತು ಬ್ರಹ್ಮಾ ತಂದೆಯ ವಿಶೇಷ ಜನ್ಮದಿನದ ಶುಭಾಶಯಗಳು, ಪ್ರಿತಿಯ ಸ್ಮೃತಿ ಮತ್ತು ಜೊತೆಜೊತೆಗೆ ಸರ್ವ ಶ್ರೇಷ್ಠಾತ್ಮರಿಗೆ ನಮಸ್ತೆ.**

ರಿವೈಸ್ ಕೋರ್ಸ್ 09-03-1994

***ಅತಿತವಾದ, ಪ್ರಿಯವಾದ, ಅದ್ಭುತವಾದ, ಸ್ನೇಹ ಮತ್ತು ಸುಖಭರಿತ ಅವತರಣೆ- ಶಿವ ಜಯಂತಿ***

ಶಿವರಾತ್ರಿಯ ದಿನದಂದು ಭಕ್ತರು ಒಂದು ದಿನದ ಭೋಜನದ, ಜಾಗರಣೆಯ, ಪಾದಯಾತ್ರೆಯ ವ್ರತವನ್ನು ಇಡುತ್ತಾರೆ. ಆದರೆ ತಮ್ಮದು ಬ್ರಾಹ್ಮಣ ಜನ್ಮಕ್ಕಾಗಿ ವ್ರತವನ್ನು ತೆಗೆದುಕೊಂಡಿದ್ದೀರಿ. ಸದಾ ಅಜ್ಞಾನದ ನಿದ್ರೆಯಿಂದ ಜಾಗರಣೆಯ ವ್ರತವನ್ನು ತೆಗೆದುಕೊಂಡಿದ್ದೀರಿ. ಶುದ್ಧ ಭೋಜನದ ವ್ರತವನ್ನು ತೆಗೆದಿಟ್ಟುಕೊಂಡಿರುವ ಕಾರಣ ಭಕ್ತರು ಸಹ ಏನೇ ಆದರೂ ಅನ್ನದ ವ್ರತವನ್ನು ಬಿಡುವುದಿಲ್ಲ. ಹಾಗಾದರೆ ತಾವೆಲ್ಲರೂ ಮನಸ್ಸಿನ, ತನುವಿನ ಮುಂದೆ ಎಂತಹ ಪರಿಸ್ಥಿತಿಗಳೇ ಬಂದರೂ ವ್ರತವನ್ನು(ಶ್ರೇಷ್ಠ ಸಂಕಲ್ಪಗಳ ವ್ರತ) ಭಂಗ ಮಾಡುತ್ತೀರಾ. ತಮ್ಮ ನಿಯಮವನ್ನು ಪರಿಪಕ್ವವಾಗಿ ಇಡುತ್ತೀರಲ್ಲವೇ? ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗಸ್ಥಿತಿ.**

ನಾನು ಆತ್ಮ ಶಾಂತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಾಲಿಗ್ರಾಮ ಮತ್ತು ದೇವಾತ್ಮ ಎಂಬ ಡಬಲ್ ರೂಪದಲ್ಲಿ ಪೂಜೆಯನ್ನು ಪಡೆಯುವ ಡಬಲ್ ಪೂಜ್ಯ ಸ್ವರೂಪ.

2. ತಂದೆಯ ಮಗುವಾದ ನಾನು ತಂದೆಯೊಂದಿಗೆ ಜನ್ಮವನ್ನು ಪಡೆದಿದ್ದೇನೆ, ತಂದೆಯೊಂದಿಗೆ ವಿಶ್ವ ಪರಿವರ್ತನೆಯನ್ನು ಮಾಡಿ ತಂದೆಯೊಂದಿಗೆ ಮನೆಗೆ(ಪರಂಧಾಮ) ಹಿಂತಿರುಗಿ ಹೋಗಿದ್ದೇನೆ.

3. ನಾನು ಇಡೀ ಕಲ್ಪದಲ್ಲಿ ಈ ಸಮಯದಲ್ಲಿಯೇ ಅತೀತವಾದ, ಪ್ರಿಯವಾದ, ಅದ್ಭುತವಾದ ನನ್ನ ಹಾಗೂ ತಂದೆಯ ಜಯಂತಿಯನ್ನು ಆಚರಿಸಿಕೊಂಡಿದ್ದೇನೆ.

4. ನಾನು ಬ್ರಾಹ್ಮಣ ಜೀವನದಲ್ಲಿ ಅಜ್ಞಾನದ ನಿದ್ರೆಯಿಂದ ಜಾಗರಣೆಯ ಮತ್ತು ಶುದ್ಧ ಭೋಜನದ (ಶ್ರೇಷ್ಠ ಸಂಕಲ್ಪಗಳ) ವ್ರತವನ್ನು ತೆಗೆದುಕೊಂಡಿದ್ದೇನೆ.

5. ನಾನು ಸಂಕಲ್ಪದ ದೃಢತೆಯಿಂದ ಸಫಲತೆಯನ್ನು ಪಡೆಯುವ ಸಫಲತಾ ಸ್ವರೂಪ.

6. ನನ್ನ ಡಿಕ್ಷನರಿಯಲ್ಲಿ ಏನು ಎಂಬ ಪದವನ್ನು ಫ್ಲೈ(ಹಾರುವುದು) ಎಂಬ ಪದದಿಂದ ಹೇಗೆ ಎಂಬ ಪದವನ್ನು ನೋ(know ತಿಳಿದಿದೆ) ಎಂಬ ಪದದಿಂದ ಪರಿವರ್ತನೆ ಮಾಡಿಕೊಂಡಿದ್ದೇನೆ.

7. ನಾನು ಮನಸ್ಸಿನಲ್ಲಿ ದೃಢಸಂಕಲ್ಪ ಎಂಬ ದೀಪವನ್ನು ಬೆಳಗಿಸಿ, ದೃಢಸಂಕಲ್ಪದಿಂದ ತಯಾರಾಗಿ ಶಿವ ಜಯಂತಿಯನ್ನು ಆಚರಿಸಿಕೊಂಡಿದ್ದೇನೆ.

8. ನಾನು ಸಂಕಲ್ಪದಲ್ಲಿಯೂ ಅಡಚಣೆಯಾಗುವ ಬಲಹೀನತೆಗಳನ್ನು ಸಮಾಪ್ತಿ ಮಾಡಿರುವ ಪರಿಪಕ್ವ ಸ್ವರೂಪ.

9. ನಾನು ಮನಸ್ಸಿನಲ್ಲಿ ಸಂಕಲ್ಪದಿಂದ, ವಾಣಿಯಿಂದ, ಕರ್ಮದಿಂದ ಪರಮಾತ್ಮನನ್ನು ಪ್ರತ್ಯಕ್ಷ ಮಾಡುವ ಧ್ವಜವನ್ನು ಹಾರಿಸಿದ್ದೇನೆ.

10. ನಾನು ಏನೇ ಆಗಲಿ, ಯಾರೇ ನನ್ನ ಖುಷಿಯನ್ನು ಕಸಿದುಕೊಳ್ಳುವ ಪ್ರಯತ್ನವನ್ನೇ ಮಾಡಲಿ ಆದರೆ ಎಲ್ಲಿಯವರೆಗೆ ಬದುಕಿರುತ್ತೇನೆಯೋ ಅಲ್ಲಿಯವರೆಗೆ ಖುಷಿಯಾಗಿರುತ್ತೇನೆ ಎಂಬ ವ್ರತವನ್ನಿಟ್ಟುಕೊಂಡಿದ್ದೇನೆ.

11. ನಾನು ವಿಲ್ ಪವರ್ ನಿಂದ ಎಲ್ಲವನ್ನೂ ಮಾಡಬಲ್ಲ ಮಾಸ್ಟರ್ ಸರ್ವಶಕ್ತಿವಂತನು.

12. ನಾನು ಮೊದಲ ನಂಬರ್ ನಲ್ಲಿ ಬರುವ ಮಾಲೆಯ ಮಣಿ.

13. ನಾನು ಮನಸ್ಸಿನಲ್ಲಿ ಸದಾ ನನ್ನ ಬಾಬಾ, ಪ್ರೀತಿಯ ಬಾಬಾ, ಮಧುರವಾದ ಬಾಬಾ ಎಂಬ ಹಾಡನ್ನು ಹಾಡುತ್ತಿದ್ದೇನೆ.

14. ನಾನು ಅನುಭವ ಎಂಬ ಕಣ್ಣುಗಳಿಂದ ಬ್ರಹ್ಮಾ ತಂದೆಯನ್ನು ತಂದೆಯಾಗಿ ಅವ್ಯಕ್ತರೂಪದಲ್ಲಿ, ಅವ್ಯಕ್ತ ಸ್ಥಿತಿಯಿಂದ ಅನುಭವ ಮಾಡುವ ಅನುಭವೀ ಸ್ವರೂಪ.